ಸಿ.ಸಿ .ನಂ. 191/2022 ಪಿಡಬ್ಲೂಃ 1

ದಿನಾಂಕಃ 04-12-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

3. ನಮ್ಮ ಫಿರ್ಯಾದುದಾರ ಸಂಸ್ಥೆಗೆ ಉಮಾ ಮಹೇಶ್ವರರವರು ಆಡಳಿತ ನಿರ್ದೇಶಕರಾಗಿರುತ್ತಾರೆ . ಪ್ರದೀಪ ಉಮಾ ಮಹೇಶ್ವರರವರು ನಮ್ಮ ಸಂಸ್ಥೆಯಲ್ಲಿ ಯಾವುದೇ ಹುದ್ದೆಯನ್ನು ನಿರ್ವಹಿಸುತ್ತಿಲ್ಲ . ಸಾಲಕ ಕೊಟ್ಟಿದ್ದರು ಎಂದು ಹೇಳಿದ ಸಂದರ್ಭದಲ್ಲಿ ನಮ್ಮ ಶಾಖೆಯ ವ್ಯವಸ್ಥಾಪಕರು ಯಾರಾಗಿದ್ದರು ಎಂದು ನನಗೆ ಗೊತ್ತಿಲ್ಲ. ಸಾಲ ಕೊಟ್ಟಿದ್ದರು ಎಂದು ಹೇಳಿದ ಸಂದರ್ಭದಲ್ಲಿ ನಾನು ಫಿರ್ಯಾದುದಾರ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ . ಆ ರೀತಿ ಫಿರ್ಯಾದುದಾರ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸದೇ ಇದ್ದುದರಿಂದ ಸಾಲ ಕೊಟ್ಟಿದ್ದರು ಎಂದು ಹೇಳಿದ ಸಂದರ್ಭದಲ್ಲಿ ಏನಾಯಿತು ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಮಾಹಿತಿಯನ್ನು ಕೇಳಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಒಂದು ಸಂಘದವರು ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸುವಾಗ ಆ ಬಗ್ಗೆ ಅವರ ಸಂಘದಲ್ಲಿ ಆಗಿರುವ ಠರಾವನ್ನು ನೀಡಬೇಕಾಗುತ್ತದೆ ಎಂದರೆ ಸರಿ . ಅಂತಹ ಠರಾವಿನಲ್ಲಿ ಸಾಲಕ್ಕಾಗಿ ಯಾರಿಗೆ ಅಧಿಕಾರವನ್ನು ಕೊಡಲಾಗಿದೆ ಎಂಬ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ . ಅಂತಹ ಠರಾವಿನಲ್ಲಿ ಯಾವ ಯಾವ ಸದಸ್ಯರು ಎಷ್ಟೆಷ್ಟು ಸಾಲವನ್ನು ಕೇಳಿರುತ್ತಾರೆ ಎಂಬ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಮೇಲೆ ಹೇಳಿದಂತಹ ಯಾವುದೇ ಠರಾವನ್ನು ನಮ್ಮ ಸಂಸ್ಥೆಗೆ ಕೊಟ್ಟಿಲ್ಲ. ನಿಖರವಾಗಿ ನಮ್ಮ ಸಂಘಕ್ಕೆ ಇಷ್ಟು ಹಣ ಬೇಕು ಎಂದು ಹೇಳಿರುವ ಯಾವುದೇ ಠರಾವನ್ನು ನಮಗೆ ಕೊಟ್ಟಿಲ್ಲ. ಅದೇ ರೀತಿ ಸಾಲಕ್ಕಾಗಿ ಅರ್ಜಿ ಸಲ್ಲಿಸಲು ಇಂತಿಂತವರಿಗೆ ಅಧಿಕಾರವನ್ನು ಕೊಟ್ಟಿರುತ್ತಾರೆ ಎಂಬ ಬಗ್ಗೆಯೂ ಸಹ ಠರಾವನ್ನು ನಮ್ಮ ಸಂಸ್ಥೆಗೆ ನೀಡಿಲ್ಲ.

4. ಆರೋಪಿಯು ತನಗೆ ಸಾಲ ಬೇಕು ಎಂದು ಏನಾದರು ನಮ್ಮ ಸಂಸ್ಥೆಗೆ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಅವರು ಸಂಘದ ವತಿಯಿಂದ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಮತ್ತು ಅವರ ಸಂಘದ ಇತರ ನಾಲ್ಕು ಜನ ಸದಸ್ಯರು ನಮ್ಮ ಶಾಖೆಗೆ ಬಂದು ಸಾಲದ ಅರ್ಜಿಗೆ ಸಹಿ ಮಾಡಿರುತ್ತಾರೆ . ಸಾಲದ ಅರ್ಜಿಗೆ ಸಾಲಗಾರರ ಭಾವ ಚಿತ್ರಗಳನ್ನು ಅಂಟಿಸುವ ಪದ್ಧತಿ ಇದೆ ಎಂದರೆ ಸರಿ. ಆರೋಪಿಯು ಸಹ ಸಾಲದ ಅರ್ಜಿಯೊಂದಿಗೆ ತನ್ನ ಭಾವ ಚಿತ್ರವನ್ನು ಕೊಟ್ಟಿರುತ್ತಾರೆ . ಸದರಿ ಸಾಲದ ಅರ್ಜಿಯನ್ನು ಈ ಕೇಸಿನಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ. ಆ ರೀತಿ ಆರೋಪಿ ಸಲ್ಲಿಸಿದ ಸಾಲದ ಅರ್ಜಿಗೆ ಜಾಮೀನುದಾರರಾಗಿ ಯಾರ್ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ . ಆ ರೀತಿ ಆರೋಪಿಯು ಸಾಲದ ಅರ್ಜಿಯನ್ನು ದಿನಾಂಕ 02-09-2019 ರಂದು ಸಲ್ಲಿಸಿರುತ್ತಾರೆ . ಸದ್ರಿ ಸಾಲದ ಅರ್ಜಿಯಲ್ಲಿ ಆರೋಪಿಯು ತನಗೆ ಒಂದು ಲಕ್ಷ ರೂಪಾಯಿ ಸಾಲ ಬೇಕು ಎಂದು ಬೇಡಿಕೆ ಇಟ್ಟಿರುತ್ತಾರೆ. ನಾವು ಐದು ಜನರಿಗೆ ತಲಾ 75 ಸಾವಿರ ರೂಪಾಯಿಯಂತೆ ಸಾಲ ಮಂಜೂರು ಮಾಡಿರುತ್ತೇವೆ. ಸದ್ರಿ ಸಾಲದ ಹಣವನ್ನು ಆರೋಪಿಯು ಕೊಟ್ಟಿರುವ ತನ್ನ ಪೋಟೋ ಇರುವಂತಹ ಸಾಲದ ಅರ್ಜಿಗೆ ಮಂಜೂರು ಮಾಡಿರುತ್ತೇವೆ . ಆ ರೀತಿ ಸದರಿ ಅರ್ಜಿಗೆ ಸಾಲವನ್ನು ಮಂಜೂರು ಆಗಿರುವ ಬಗ್ಗೆ ಸಾಲ ಮಂಜೂರಾತಿ ಪತ್ರವನ್ನು ಹಾಜರು ಪಡಿಸಿಲ್ಲ. ಆ ರೀತಿ ಆರೋಪಿ ಕೊಟ್ಟಿರುವ ಸಾಲದ ಅರ್ಜಿಗೆ ಎರಡು ಜನ ಜಾಮೀನುದಾರರು ಸಹಿ ಮಾಡಿರಬಹುದು.

5. ಒಂದು ಸಂಘ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿದಾಗ ಸದರಿ ಅರ್ಜಿಯಲ್ಲಿ ನಿಖರವಾಗಿ ಇಷ್ಟು ಸಾಲ ಬೇಕು ಎಂದು ನಮೂದು ಮಾಡದಿದ್ದರೆ ಅಂತಹ ಅರ್ಜಿ ತಿರಸ್ಕರಿಸಲ್ಪಡುತ್ತದೆ ಎಂದರೆ ಸರಿ . ಆ ರೀತಿ ಕೊಟ್ಟಿರುವಂತಹ ಸಾಲದ ಅರ್ಜಿ ಹಾಗೂ ದಾಖಲೆಗಳು ನಮ್ಮ ಸಂಘದಲ್ಲಿ ಇರುತ್ತದೆ ಎಂದರೆ ಸರಿ . ಸಾಲಕ್ಕಾಗಿ ಅರ್ಜಿಯನ್ನು ಕೊಡಲು ಬಂದಾಗ ಸಾಲಕ್ಕೆ ಸಂಬಂಧಪಟ್ಟ ದಾಖಲೆಗಳಿಗೆ ನಾವು ಸಹಿಗಳನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿಯಲ್ಲ. ನಿಪಿ-7 ಸಾಲದ ಅರ್ಜಿ, ಆರೋಪಿಯು ಕೊಟ್ಟಿರುವ ಸಾಲದ ಅರ್ಜಿ ಅಲ್ಲ ಎಂದರೆ ಸರಿ. ನಿಪಿ-7 ರಲ್ಲಿ ಎಷ್ಟು ಸಾಲದ ಹಣ ಬೇಕು ಎಂದು ನಮೂದು ಇಲ್ಲ ಎಂದರೆ ಸರಿ.

ಅದೇ ರೀತಿ ನಿಪಿ-7 ರಲ್ಲಿ ಕ್ರಮ ಸಂಖ್ಯೆ 7 ನ್ನು ಭರ್ತಿ ಮಾಡದೇ ಹಾಗೆಯೇ ಬಿಡಲಾಗಿದೆ ಎಂದರೆ ಸರಿ . ನಿಪಿ-7 ರಲ್ಲಿ ಆರೋಪಿಯ ಸಹಿ ಇರುವುದಿಲ್ಲ. ನಿಪ-7 ರಲ್ಲಿ ಒಂದು ಪುಟ ಮಾತ್ರ ಇರುತ್ತದೆ. ನಿಪಿ-7 ರ ಇನ್ನೊಂದು ಪ್ರತಿಯನ್ನು ಹಾಜರು ಪಡಿಸಿದ್ದು , ಅದರಲ್ಲಿ 2 ಪುಟಗಳು ಇರುತ್ತವೆ . ಸದರಿ ನಿಪಿ-7 ರ 2 ಪುಟಗಳಿರುವ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -14 ಎಂದು ಗುರುತಿಸಲಾಯಿತು. ನಿಪಿ-7 ರ 2 ನೇ ಪುಟವನ್ನು ಯಾಕೆ ಮರೆ ಮಾಚಿದಿರಿ ಎಂದರೆ ನನಗೆ ಗೊತ್ತಿಲ್ಲ . ನಿಪಿ-14 ರಲ್ಲಿ ಎಷ್ಟು ಹಣಕ್ಕಾಗಿ ಅರ್ಜಿಯನ್ನು ಸಲ್ಲಿಸಬೇಕು ಎಂಬ ಬಗ್ಗೆ ಠರಾವು ಆಗಿದೆ ಎಂದು ನಮೂದು ಇಲ್ಲ ಎಂದರೆ ಸರಿ . ನಿಪಿ-14 ರ 2 ನೇ ಪುಟದಲ್ಲಿ ಆರೋಪಿಯ ಸಹಿ ಇದೆ . ಸದರಿ ಸಹಿಯನ್ನು ಆರೋಪಿಯು ತನಗೆ ಸಾಲ ಬೇಕೆಂತ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ . ನಿಪಿ-14 ರಲ್ಲಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿದವರ ಸಹಿ ಇರುವ ಜಾಗದಲ್ಲಿ ಆರೋಪಿಯ ಸಹಿ ಇಲ್ಲ ಎಂದರೆ ಸರಿ.

6. ನಿಪಿ-8, ಸ್ವ ಸಹಾಯ ಗುಂಪಿಗೆ ಸಾಲ ನೀಡಿಕೆ ದಾಖಲೆಯಲ್ಲಿ ಸಾಲ ಮಂಜೂರು ಆದ ಬಗ್ಗೆ ಹಾಗೂ ಎಷ್ಟು ಹಣ ಮಂಜೂರಾಯಿತು ಎಂಬ ಬಗ್ಗೆ ಎಲ್ಲಿಯೂ ನಮೂದು ಇಲ್ಲ ಎಂದರೆ ಸರಿ . ನಿಪಿ-8 ರಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕರ ಸಹಿಗಳು ಇರಬೇಕಾಗಿತ್ತು , ಆದರೆ ಅದರಲ್ಲಿ ಅವರ ಸಹಿಗಳು ಇಲ್ಲ ಎಂದರೆ ಸರಿ . ನಿಪಿ-8 ರ 2 ನೇ ಪುಟವನ್ನು ಸಂಪೂರ್ಣವಾಗಿ ಭರ್ತಿ ಮಾಡದೇ ಹಾಗೆಯೇ ಖಾಲಿ ಬಿಡಲಾಗಿದೆ ಎಂದರೆ ಸರಿ . ನಿಪಿ-9 ಡಿಮಾಂಡ ಪ್ರಾಮಿಸರಿ ನೋಟಿನಲ್ಲಿಯೂ ಸಹ ಮೇಲಿನ ಭಾಗವನ್ನು ಭರ್ತಿ ಮಾಡದೇ ಖಾಲಿ ಬಿಡಲಾಗಿದೆ ಎಂದರೆ ಸರಿ . ಡಿಮಾಂಡ್ ಪ್ರಾಮಿಸರಿ ನೋಟನ್ನು ನಮ್ಮ ಸಂಸ್ಥೆಯ ಸಿಬ್ಬಂದಿಯವರು ತುಂಬಿದ ನಂತರ ಸಾಲಗಾರರ ಹಾಗೂ ಜಾಮೀನುದಾರರ ಸಹಿಗಳನ್ನು ಪಡೆದುಕೊಳ್ಳುವಂತಹದ್ದು ಎಂದರೆ ಸರಿ . ನಿಪಿ-9 ವಚನಪತ್ರದಲ್ಲಿ ಶ್ರೀದೇವಿ ಸಂಘ ಎಂದು ನಮೂದಾಗಿದ್ದು , ಅದು ಎಲ್ಲಿದೆ ಎಂಬ ಬಗ್ಗೆ 'ಸಾಕೀನ' ಎಂಬ ಸ್ಥಳವನ್ನು ಭರ್ತಿ ಮಾಡಿಲ್ಲ ಎಂದರೆ ಸರಿ . ನಿಪಿ-9 ರಲ್ಲಿ ಸಾಲದ ಹಣ ಹಾಗೂ ಬಡ್ಡಿಯನ್ನು ನಮೂದು ಮಾಡದೇ ಖಾಲಿಯಾಗಿ ಇಡಲಾಗಿದೆ

ಎಂದರೆ ಸರಿ. ನಿಪಿ-9 ನ್ನು ಸಹ ನಮ್ಮ ಸಿಬ್ಬಂದಿಯವರು ತುಂಬಿದ ನಂತರ ಅದಕ್ಕೆ ಸಾಲಗಾರರ ಹಾಗೂ ಜಾಮೀನುದಾರರ ಸಹಿಗಳನ್ನು ಪಡೆದುಕೊಳ್ಳುವಂತಹದ್ದು ಎಂದರೆ ಸರಿ.

7. ನಿಪಿ-11 ಆಂತರಿಕ ಒಪ್ಪಂದ ಪತ್ರದಲ್ಲಿಯೂ ಸಹ ಮೇಲಿನ ಭಾಗದಲ್ಲಿ ದಿನಾಂಕ, ತಿಂಗಳು ಹಾಗೂ ಇಸವಿಯನ್ನು ಖಾಲಿ ಬಿಟ್ಟಿರುತ್ತೇವೆ ಎಂದರೆ ಸರಿ . ನಿಪಿ-11ರ ಕೆಳಗಿನ ಭಾಗದಲ್ಲಿಯೂ ಸಹ ಸಾಲದ ಹಣವನ್ನು ನಮೂದು ಮಾಡಿಲ್ಲ ಎಂದರೆ ಸರಿ . ನಿಪಿ-11ರ ಕೊನೆಯ ಪುಟದಲ್ಲಿಯೂ ಸಹ ದಿನಾಂಕ, ತಿಂಗಳು, ಇಸವಿ ಹಾಗೂ ಸ್ಥಳವನ್ನು ಖಾಲಿ ಬಿಟ್ಟಿರುತ್ತೇವೆ ಎಂದರೆ ಸರಿ . ನಿಪಿ-11ಕ್ಕೆ ಸಾಕ್ಷಿದಾರರ ಸಮ್ಮುಖದಲ್ಲಿ ಸಹಿ ಮಾಡಬೇಕಾಗಿದ್ದರಿಂದ ಅದರಲ್ಲಿ ಸಾಕ್ಷಿಗಳು ಎಂದು ಮುದ್ರಣ ಆಗಿದೆ ಎಂದರೆ ಸರಿ. ನಿಪಿ-11ರಲ್ಲಿ ಸಾಕ್ಷಿದಾರರ ಸಹಿಗಳು ಇಲ್ಲ ಎಂದರೆ ಸರಿ . ನಿಪಿ-12 ಸಾಲ ಒಪ್ಪಂದ ಅನುಚ್ಛೇದ ಪತ್ರವೂ ಸಹ ಸಂಪೂರ್ಣವಾಗಿ ಖಾಲಿ ಬಿಡಲಾಗಿದೆ ಎಂದರೆ ಸರಿ . ನಿಪಿ-12ರ ಕೊನೆಯ ಪುಟದಲ್ಲಿ ಅಧಿಕೃತ ಪ್ರತಿನಿಧಿ ಎಂದು ಒಬ್ಬರ ಸಹಿ ಮಾತ್ರ ಇದೆ ಎಂದರೆ ಸಾಕ್ಷಿಯು ಇಬ್ಬರ ಸಹಿಗಳು ಇವೆ ಎಂದು ನುಡಿಯುತ್ತಾರೆ . ಸದರಿ ಇಬ್ಬರ ಸಹಿಗಳು ಯಾರ್ಯಾರದ್ದು ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ-11 ಮತ್ತು 12 ನ್ನು ಸಹ ನಮ್ಮ ಸಿಬ್ಬಂದಿಯವರು ತುಂಬಿದ ನಂತರ ಸಾಲಗಾರರ ಹಾಗೂ ಜಾಮೀನುದಾರರ ಸಹಿಗಳನ್ನು ಪಡೆಯುವಂತದ್ದು ಎಂದರೆ ಸಾಕ್ಷಿಯು ಸಾಲಕ್ಕಾಗಿ ಅರ್ಜಿ ಸಲ್ಲಿಸಿದವರೆ ಅವುಗಳನ್ನು ತುಂಬಿರುತ್ತಾರೆ ಎಂದು ನುಡಿಯುತ್ತಾರೆ . ಆ ರೀತಿ ನಿಪಿ-11 ಮತ್ತು 12 ನ್ನು ಯಾರು ತುಂಬಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಆ ರೀತಿ ನಿಪಿ-11 ಮತ್ತು 12 ನ್ನು ಸಾಲಕ್ಕಾಗಿ ಅರ್ಜಿ ಸಲ್ಲಿಸಿದವರೇ ತುಂಬಿರುತ್ತಾರೆ ಎಂದು ಯಾವ ಆಧಾರದ ಮೇರೆಗೆ ಹೇಳಿರುತ್ತೀರಿ ಎಂದರೆ ಸಾಕ್ಷಿಯು ಕಚೇರಿನ ಹೆಚ್ಚಿನ ಮಾಹಿತಿಯನ್ನು ಪಡೆದುಕೊಂಡು ಆ ಬಗ್ಗೆ ಹೇಳುತ್ತೇನೆ ಎಂದು ನುಡಿಯುತ್ತಾರೆ . ನಿಪಿ-7 ರಿಂದ 12 ಹಾಗೂ 14ರಲ್ಲಿ ಅವುಗಳನ್ನು ಯಾವ ದಿನಾಂಕದಂದು ಬರೆಯಲ್ಪಟ್ಟಿರುತ್ತದೆ ಹಾಗೂ ಸಹಿಗಳನ್ನು ತೆಗೆದುಕೊಳ್ಳಲಾಗಿದೆ ಎಂದು ನಮೂದು ಇಲ್ಲ ಎಂದರ ಸರಿ. ನಿಪಿ-7 ರಿಂದ 12 ಹಾಗೂ 14 ಕ್ಕೆ ಒಂದೇ ದಿನ ಸಹಿಗಳನ್ನು ಪಡೆದುಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ . ನಿಪಿ-7 ರಿಂದ 12 ಹಾಗೂ

14 ರಲ್ಲಿ ಆರೋಪಿಯ ಸಹಿಗಳು ಇಲ್ಲ ಎಂದರೆ ಸರಿಯಲ್ಲ . ಆ ರೀತಿ ಆರೋಪಿಯ ಸಹಿ ಕೇವಲ ನಿಪಿ- 14 ರಲ್ಲಿ ಮಾತ್ರ ಇದೆ . ನಿಪಿ-7 ರಿಂದ 12 ರಲ್ಲಿ ಆರೋಪಿಯ ಸಹಿಗಳು ಇರುವುದಿಲ್ಲ.

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.